ಮೇಲೇಳುತ್ತದೆಯೋ ನೋಡಬೇಕು’ ಎಂದನು.

ಜೋಯಿಸರಿಗೆ ಕಳೆದ ವರ್ಷ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯ ನೆನಪಾಯಿತು. ಅದರಲ್ಲಿ ಭೋಜೇಗೌಡರಿಗೆ ಎದುರಾಳಿಯಾಗಿ ಸ್ಪರ್ಧಿಸಿದ್ದವನು ನಟರಾಜ. ಅದರಲ್ಲೂ ಹೀಗೆ ಕೊನೆಯ ಗಳಿಗೆಯವರಿಗೆ ಗೆಲ್ಲುವ ಕುದುರೆಯಂತೆ ಓಡುತ್ತಿದ್ದುದು ಊರಿನ ಜನರ ಪ್ರೀತಿಯನ್ನು ಗಳಿಸಿ, ಜನಸೇವಕ ಎಂದು ಹೆಸರು ಮಾಡಿದ್ದ ನಟರಾಜ. ಊರಿನ ಜನರ ಕಷ್ಟಗಳಿಗೆ ಮಿಡಿಯುತ್ತಾ, ನಿಸ್ವಾರ್ಥ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ ನಟರಾಜನ ಆಯ್ಕೆ ಬಹುತೇಕ ಖಚಿತವಾಗಿತ್ತು. ನಟರಾಜನ ಜಾತಿಯವರು ಆ ಊರಿನಲ್ಲಿ ಬೆರಳೆಣಿಕೆಯಷ್ಟು ಮಾತ್ರ ಇದ್ದರು. ಆ ಊರಿನಲ್ಲಿದ್ದ ಬಹುಪಾಲು ಜನ ಎರಡು ಪ್ರಮುಖ ಜಾತಿಗೆ ಸೇರಿದ್ದವರು. ಆದರೆ, ಜನ ಜಾತಿ ನೋಡದೆ ನಟರಾಜನಿಗೇ ನಮ್ಮ ಓಟು ಎಂದು ನಿರ್ಧರಿಸಿದ್ದರು. ಆ ಸಮಯದಲ್ಲಿ ನಟರಾಜನು ತನ್ನ ಜಾತಿಯವರ ಯಾರದೋ ಮನೆಯಲ್ಲಿನ ಸಮಾರಂಭಕ್ಕೆ ಹೋಗಿದ್ದಾಗ, ‘ಈ ಬಾರಿ ನಾನೇನಾದ್ರೂ ಎಲೆಕ್ಷನ್‌ನಲ್ಲಿ ಗೆದ್ದರೆ ಊರಿನ ಎರಡು ಜಾತಿಯವರನ್ನೂ ಒಂದೊಂದು ಕಾಲಿನಲ್ಲಿ ಪಾತಾಳಕ್ಕೆ ತುಳಿಯುತ್ತೇನೆ’ ಎಂದು ಹೇಳಿದನಂತೆ ಎಂಬ ಗಾಳಿಸುದ್ದಿ ಬಹಳ ವೇಗವಾಗಿ ಕಾಳ್ಗಿಚ್ಚಿನಂತೆ ಹರಡಿತು.

ಇದಾಗಿ ಮಾರನೇ ದಿನ ತಮ್ಮ ಜಾತಿಯ ಮುಖಂಡರನ್ನು ತಮ್ಮ ತಮ್ಮ ಸನ್ನಿಧಾನಕ್ಕೆ ಕರೆಸಿಕೊಂಡ ಆಯಾಯ ಜಾತಿಯ ಮಠದ ಸ್ವಾಮಿಗಳು, ‘ಯಾರ್ರೀ ಅವನು ನಟರಾಜ? ಗೆದ್ದು ಬಂದ್ರೆ ನಮ್ಮ ಜಾತಿಯನ್ನು ಕಾಲಲ್ಲಿ ಹೊಸಕಿ ಹಾಕ್ತೀನಿ ಅಂತ ಹೇಳಿದ್ದಾನಂತೆ? ಕೊಬ್ಬಿದ ಅವನಿಗೆ ನಮ್ಮ ಸಮುದಾಯದವರ ಒಂದೂ ಓಟು ಬೀಳದಂತೆ ನೋಡಿಕೊಳ್ಳಬೇಕು’ ಎಂದು ಫರ್ಮಾನು ಹೊರಡಿಸಿದರು. ಸ್ವಾಮಿಗಳ ಆಜ್ಞೆಯನ್ನು ಯಾರಾದರೂ ಮೀರುವುದುಂಟೆ? ಇದು ಒಂದೂ ಗೊತ್ತಿರದಿದ್ದ ನಟರಾಜನು ತಾನು ಗೆದ್ದೇ ಗೆಲ್ಲುವೆನೆಂಬ ನಂಬಿಕೆಯಲ್ಲಿದ್ದನು. ಹೊಸ ಹುಮ್ಮಸ್ಸಿನಿಂದ ಜನನಾಯಕನಾಗಿ ಸಮಾಜದಲ್ಲಿ ಒಳ್ಳೆಯ ಹೆಸರು ಮಾಡಬೇಕು ಎಂದು ಬಹಳ ಆಸೆ–ಆಕಾಂಕ್ಷೆಗಳನ್ನಿಟ್ಟುಕೊಂಡಿದ್ದನು. ಆದರೆ, ಅನಿರೀಕ್ಷಿತವಾಗಿ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡು ಸೋತ ನಟರಾಜನು ಸೋಲಿನ ಆಘಾತ ಮತ್ತು ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡನು.



ಹೀಗಾಗಿ ಸೋಲುತ್ತಾರೆಂದುಕೊಂಡಿದ್ದ ಭೋಜೇಗೌಡ ಆ ಬಾರಿ ಅಭೂತಪೂರ್ವವಾಗಿ ಗೆದ್ದು ಗ್ರಾಮಪಂಚಾಯಿತಿಯ ಅಧ್ಯಕ್ಷನೂ ಆದ. ಕೊನೆಯವರೆಗೆ ನಟರಾಜನು ಹೇಳಿದ್ದಾನೆಂದು ಹಬ್ಬಿಸಿದ ಗಾಳಿಸುದ್ದಿಯನ್ನು ಸೃಷ್ಟಿಸಿದ್ದು ಯಾರು? ಒಂದೇ ದಿನದಲ್ಲಿ ಆಯಾಯ ಜಾತಿಯ ಮಠಗಳಿಗೆ ಈ ವಿಷಯವನ್ನು ತಲುಪಿಸಿದ್ದು ಯಾರು? ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಭೋಜೇಗೌಡನ ರಾಜಕೀಯ ತಂತ್ರಗಾರಿಕೆ, ಅತಿ ವಿನಯ, ಬೆಣ್ಣೆಯಲ್ಲಿ ಕೂದಲು ತೆಗೆಯುವಂತಹ ನಯವಾದ ಮಾತುಗಾರಿಕೆ, ಸಮಯ ನೋಡಿ ಪಟ್ಟು ಹಾಕುವ ಕಲೆ ಇತ್ಯಾದಿಗಳ ಬಗೆಗೆ ಗೊತ್ತಿದ್ದ ಆನಂದಪ್ಪ ಮತ್ತು ಜೋಯಿಸರಿಗೆ, ಎದುರಾಳಿಗಳಿಗೆ ಮಣ್ಣುಮುಕ್ಕಿಸುವ ಭೋಜೇಗೌಡನ ಸಾಮರ್ಥ್ಯದ ಬಗ್ಗೆ ಕಿಂಚಿತ್ತೂ ಅನುಮಾನವಿರಲಿಲ್ಲ.

ಮಾರನೆಯ ದಿನ ಒಂದಿಬ್ಬರು ಪಂಚಾಯಿತಿಯ ಮೆಂಬರ್‌ಗಳು, ಜೋಯಿಸರು, ಆನಂದಪ್ಪ ಮತ್ತು ಶಿವರಾಮನು, ಶ್ರೀನಿವಾಸರಾಯರ ಕೊಠಡಿಯಲ್ಲಿ ಅವರ ಭಾವಚಿತ್ರವನ್ನು ಹುಡುಕಿ ತರಲು ಹೊರಟರು. ಕೊಠಡಿಯ ಬೀಗದ ಕೀ ಶ್ರೀನಿವಾಸರಾಯರ ಮರಣದ ನಂತರ ಪಂಚಾಯಿತಿಯ ಅಧ್ಯಕ್ಷರಾದ ಭೋಜೇಗೌಡನ ಹತ್ತಿರವೇ ಇತ್ತು. ಅದನ್ನು ತೆಗೆದುಕೊಂಡು ಬಂದ ಶಿವರಾಮ ಕೊಠಡಿಯ ಬೀಗವನ್ನು ತೆರೆದು ಒಳಗೆ ಬಂದನು. ಶಿವರಾಮನು ಆ ಕೊಠಡಿಯಲ್ಲಿಯೇ ತನ್ನ ಬಹಳಷ್ಟು ಅಮೂಲ್ಯ ಸಮಯವನ್ನು ಶ್ರೀನಿವಾಸರಾಯರೊಂದಿಗೆ ಕಳೆದಿದ್ದುದರಿಂದ ಆ ಕೊಠಡಿಯ ಮೂಲೆಮೂಲೆಯೂ ಅವನಿಗೆ ಚಿರಪರಿಚಿತವಾಗಿತ್ತು. ಆದರೆ, ಅವರ ಮರಣದ ನಂತರ ಆ ಕೊಠಡಿಗೆ ಬಂದಿರಲಿಲ್ಲ. ಕೊಠಡಿಯ ಒಳಗೆ ಒಂದು ಮೇಜು, ಕುರ್ಚಿ, ಮೂಲೆಯಲ್ಲಿ ಸುತ್ತಿದ್ದ ಒಂದು ಚಾಪೆಯಿತ್ತು. ಕೊಠಡಿಯು ಆಗತಾನೇ ಗುಡಿಸಿದಂತೆ ಅಚ್ಚುಕಟ್ಟಾಗಿತ್ತು. ಮೂಲೆಯಲ್ಲಿ ಮತ್ತು ಅಲ್ಮೇರಾದಲ್ಲಿ ನೀಟಾಗಿ ಜೋಡಿಸಿದ್ದ ಪುಸ್ತಕದ ರಾಶಿಯೇ ಇತ್ತು. ಒಬ್ಬೊಬ್ಬರು ಒಂದೊಂದು ಕಡೆ ಶ್ರೀನಿವಾಸರಾಯರ ಭಾವಚಿತ್ರವನ್ನು ಮೇಜು, ಅಲ್ಮೇರಾ, ಪುಸ್ತಕಗಳಲ್ಲೆಲ್ಲಾ